




ವಾಗೀಶ ಹೆಗಡೆ

# ಗಜಲ್

ಒಂಟಿ ಚಂದಿರನ ಮುಖವು ಬಾಡುತಿದೆ ಯಾಕೋ
ಗುಲ್‌ಮೊಹರ್ ಇಂದು ಬಲು ನಾಚುತಿದೆ ಯಾಕೋ

ಚಳಿಗಾಲದ ಒಣಗಾಳಿಯು ಬಿಡದೆ ಬೀಸುತಿದೆ ಯಾಕೋ
ಮೈತುಂಬಿ ಹರಿವ ಜೀವನದಿ ಒಣಗುತಿದೆ ಯಾಕೋ

ರೆಕ್ಕೆ ಬಿಚ್ಚದ ಹಕ್ಕಿ ಕೊರಗುತಿದೆ ಯಾಕೋ
ಬಣ್ಣದ ಚಿಟ್ಟೆಯು ಕನಸಹೂ ಮುಡಿಯುತಿದೆ ಯಾಕೋ

ಪಾಳುಬಿದ್ದ ಕೋಟೆ ನೂರು ಕತೆಯ ಸಾರುತಿದೆ ಯಾಕೋ
ಅರಳಬೇಕಾದ ಸಖಿಯ ಒಲವು ಹುಡಿಯಾಗುತಿದೆ ಯಾಕೋ

ಗರಿಬಿಚ್ಚಿ ಕುಣಿವ ನವಿಲಿಗೆ ಮುಳ್ಳು ಮುರಿದಿದೆ ಯಾಕೋ
ಜಾತ್ರೆಯಲಿ ಕೊಂಡು ತಂದ ಗೊಂಬೆ ಮಾತನಾಡುತಿದೆ ಯಾಕೋ

● ದಸ್ತಗೀರಸಾಬ್ ದಿನ್ನಿ